ದಿನಾಂಕ 22-07-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ರಿಂದ 9 ನೇ ಪ್ರತಿವಾದಿಯರ ಪರ ಶ್ರೀ ಎ.ಟಿ.ಬಿ ವಕೀಲರಿಂದ.**

ಗೋವಿನದೊಡ್ಡಿ ಗ್ರಾಮದಲ್ಲಿರುವ 40 ಎಕರೆ ಜಮೀನು ಬೇರೆ ಬೇರೆ ಸರ್ವೆ ನಂಬರಗಳಲ್ಲಿ ಇರುತ್ತದೆ. 40 ಎಕರೆ ಜಮೀನಿನ ಬೇರೆ ಬೇರೆ ಸರ್ವೆ ನಂಬರಗಳು ಒಟ್ಟು ಎಷ್ಟು ಇರುತ್ತದೆ ಗೊತ್ತಿಲ್ಲ. ಗೋವಿನದೊಡ್ಡಿ ಗ್ರಾಮದಲ್ಲಿರುವ ಪ್ರತಿ ಸರ್ವೆ ನಂಬರ ಜಮೀನಿನ ವಿಸ್ತೀರ್ಣ ಗೊತ್ತಿಲ್ಲ. ನಾನು 40 ಎಕರೆ ಜಮೀನಿನ ಪಹಣಿಗಳನ್ನು ನೋಡಿರುತ್ತೇನೆ. ನಾನು ಗೋವಿನದೊಡ್ಡಿ ಸೀಮಾಂತರದ 40 ಎಕರೆ ಜಮೀನುಗಳ ಪಹಣಿಗಳನ್ನು ಸುಮಾರು 40 ವರ್ಷಗಳ ಹಿಂದೆ ನೋಡಿರುತ್ತೇನೆ. ನಾನು ಸದರಿ ಪಹಣಿಗಳನ್ನು ದೇವದುರ್ಗ ಕಚೇರಿಯಿಂದ ತೆಗೆಸಿ ನೋಡಿರುತ್ತೇನೆ. ನನ್ನ ಅಣ್ಣನಿಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ಅಣ್ಣನ ಹೆಸರು ಹನುಮಗೌಡ ಆಗಿರುತ್ತದೆ. 40 ಎಕರೆ ಜಮೀನಿನ ಪಹಣಿಯನ್ನು ತೆಗೆಸಿದ ನಂತರ ನನ್ನ ಅಣ್ಣ ಸದರಿ 40 ಎಕರೆ ಜಮೀನಿನ ಸರ್ವೆ ನಂಬರಗಳನ್ನು ನನಗೆ ಹೇಳಿರುವುದಿಲ್ಲ.

ನನ್ನ ವಾದ ಪತ್ರದಲ್ಲಿ ಗೋವಿನದೊಡ್ಡಿ ಸೀಮಾಂತರದಲ್ಲಿ 40 ಎಕರೆ ಜಮೀನು ಇರುವುದಾಗಿ ಬರೆಸಿರುತ್ತೇನೆ. ನಾನು ಸದರಿ 40 ಎಕರೆ ಜಮೀನಿನ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಗೋವಿನದೊಡ್ಡಿ ಸೀಮಾಂತರದಲ್ಲಿ 40 ಎಕರೆ ಜಮೀನು ಇದ್ದು ಆ ಬಗ್ಗೆ ಪಹಣಿಗಳನ್ನು ಹಾಜರುಪಡಿಸಿರುವುದಾಗಿ ಮತ್ತು ವಾದ ಪತ್ರದಲ್ಲಿ ಹೇಳಿರುವುದಾಗಿ ಹೇಳಿರುತ್ತೇನೆ. ನಾನು ಈ ದಾವೆಯನ್ನು ಮನೆಗಳ ಮೇಲೆ ಹೂಡಿರುವುದಿಲ್ಲ. ನಾನು ಮನೆಯನ್ನು ಈ ದಾವೆಯಲ್ಲಿ ಯಾವ ಕಾರಣಕ್ಕಾಗಿ ಸೇರಿಸಿರುವುದಿಲ್ಲ ಗೊತ್ತಿಲ್ಲ. ನಮ್ಮ ಕುಟುಂಬದ ಮನೆ ಗೋವಿನದೊಡ್ಡಿಯಲ್ಲಿ ಬರುತ್ತದೆ. ಆ ಮನೆಯನ್ನು ನಾನು ನೋಡಿರುತ್ತೇನೆ. ಮನೆ ಗೋವಿನದೊಡ್ಡಿಯ ಉತ್ತರಕ್ಕೆ ಬರುತ್ತದೆ. ಆ ಮನೆ ಯಾರ ಹೆಸರಿನಲ್ಲಿ ಇರುತ್ತದೆ ಮತ್ತು ಆ ಮನೆಯ ನಂಬರ ಗೊತ್ತಿಲ್ಲ. ಆ ಮನೆಯಲ್ಲಿ ಒಟ್ಟು 8 ಕೋಣೆಗಳು ಇರುತ್ತವೆ. ಆ ಮನೆಗೆ 8 ಬಾಗಿಲುಗಳು ಇದ್ದು ಕಿಡಕಿಗಳು ಇರುವುದಿಲ್ಲ. ಆ ಮನೆಗೆ ಹೋಗಲು ಎರಡು ಮುಖ್ಯ ದ್ವಾರಗಳಿದ್ದು ಒಂದು ಚಿಮ್ಲಾಪೂರ ಕಡೆ ಇದ್ದು ಇನ್ನೊಂದು ಬಾಗಿಲು ಗೋವಿನದೊಡ್ಡಿಯ ಕಡೆ ಇರುತ್ತದೆ. ಆ ಮನೆಯ ಒಂದು ಮುಖ್ಯ ದ್ವಾರ ಪಶ್ಚಿಮಕ್ಕೆ ಬರುತ್ತದೆ, ಇನ್ನೊಂದು ಉತ್ತರಕ್ಕೆ ಬರುತ್ತದೆ. ಆ ಮನೆಗೆ 8 ಕೋಣೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆ ಮನೆಗೆ ಒಂದು ಪಡಸಾಲೆ, ಒಂದು ಅಂಗಳ ಮತ್ತು ಎತ್ತುಗಳನ್ನು ಕಟ್ಟುವ ಕೋಣೆಗಳು ಎರಡು ಇರುತ್ತವೆ ಎಂದರೆ ಸರಿಯಲ್ಲ. ಆ ಮನೆ ಪೂರ್ವ ದಿಕ್ಕಿಗೆ ಮುಖ ಮಾಡಿ ಇರುತ್ತದೆ ಎಂದರೆ ಸರಿಯಲ್ಲ. ಆ ಮನೆಯ

ಅಕ್ಕಪಕ್ಕ ಸಹೋದರ ಸಂಬಂಧಿಗಳ ಮನೆಗಳು ಇದ್ದು ಅವರ ಹೆಸರು ತಿಮ್ಮಯ್ಯ, ಹನುಮಯ್ಯ, ಲಂಕೆಯ್ಯ, ಭೀಮರಾಯ ಆಗಿರುತ್ತದೆ. ಹನುಮಯ್ಯ ರವರ ಮನೆ ನಮ್ಮ ಕುಟುಂಬದ ಮನೆಯ ಉತ್ತರಕ್ಕೆ ಬರುತ್ತದೆ, ಲಂಕಯ್ಯ ಹಾಗೂ ಉಳಿದ ಸಹೋದರರ ಮನೆಗಳೂ ಸಹ ಉತ್ತರಕ್ಕೆ ಬರುತ್ತವೆ. ಆ ಮನೆಯ ಪೂರ್ವ, ಪಶ್ಚಿಮ ಹಾಗೂ ದಕ್ಷಿಣಕ್ಕೆ ಮನೆಗಳು ಬರುವುದಿಲ್ಲ. ಆ ಮನೆಗೆ ಹೋಗಲು ರಸ್ತೆ ಉತ್ತರದಿಂದ ದಕ್ಷಿಣಕ್ಕೆ ಇರುತ್ತದೆ. 1 ನೇ ಪ್ರತಿವಾದಿಯ ಮನೆಯ ಸುತ್ತಲೂ ಮೇಲೆ ಹೇಳಿದ ತಿಮ್ಮಯ್ಯ, ಹನುಮಯ್ಯ, ಲಂಕೆಯ್ಯ, ಭೀಮರಾಯ ರವರ ಮನೆಗಳು ಇರುವುದಿಲ್ಲ 1 ನೇ ಪ್ರತಿವಾದಿಯ ಮನೆ ಬಿಟ್ಟು 8 ಮೈಲುಗಳ ನಂತರ ಅವರ ಮನೆಗಳು ಬರುತ್ತವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆಯ ಪೂರ್ವ ಮತ್ತು ಪಶ್ಚಿಮಕ್ಕೆ ಮುಸಲ್ಮಾನರ ಮನೆಗಳು ಇದ್ದು ದಕ್ಷಿಣಕ್ಕೆ ಮಹಾದೇವಪ್ಪ ರವರ ಮನೆ ಇರುತ್ತದೆ ಎಂದರೆ ಸರಿಯಲ್ಲ. ಉತ್ತರಕ್ಕೆ 1 ನೇ ಪ್ರತಿವಾದಿಗೆ ಸಂಬಂಧಿಸಿದ ಖಾಲಿ ಜಾಗ ಇರುತ್ತದೆ ಎಂದರೆ ಸರಿಯಲ್ಲ.

ನಾಗನಗೌಡ ರವರು ಹೆಗ್ಗಡದಿನ್ನಿಯಲ್ಲಿ ತೀರಿಕೊಂಡಿದ್ದು ಅವರು ತೀರಿಕೊಂಡು ಸುಮಾರು 50 ವರ್ಷ ಆಗಿರುತ್ತದೆ. ನಾಗನಗೌಡ ರವರನ್ನು ಜಮೀನಿನಲ್ಲಿ ಮಣ್ಣು ಮಾಡಿದ್ದು ಆಗ ನಾನು ಹೋಗಿದ್ದೆ. ನಾನು 50 ವರ್ಷಗಳ ಹಿಂದೆ ನಾಗನಗೌಡ ರವರ ಮಣ್ಣಿಗಾಗಿ ಹೋಗಿದ್ದು ಈ ವಿಷಯ ನನಗೆ ನಿಖರವಾಗಿ ನೆನಪಿರುತ್ತದೆ. ನಾಗನಗೌಡ ರವರು 2005 ರಲ್ಲಿ ತೀರಿಕೊಂಡಿದ್ದು 50 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದು ಹೇಳಿದ್ದು ಸುಳ್ಳು ಇರುತ್ತದೆ ಎಂದರೆ ನಾಗನಗೌಡ ರವರು ತೀರಿಕೊಂಡು 19 ವರ್ಷ ಆಗಿರುತ್ತದೆ ಎಂದು ಹೇಳುತ್ತಾರೆ. ನಾನು ನಾಗನಗೌಡ ರವರ ಮಣ್ಣಿಗೆ ಹೋಗಿಲ್ಲ ಮತ್ತು ಅವರು ತೀರಿಕೊಂಡಿದ್ದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾಗನಗೌಡ ರವರ ಹೆಂಡತಿ ಹನುಮಂತಿಯವರು ತೀರಿಕೊಂಡು 10 ವರ್ಷ ಆಗಿರುತ್ತದೆ. ನಾನು ಹನುಮಂತಿಯವರ ಮಣ್ಣಿಗೆ ಹೋಗಿರುತ್ತೇನೆ. ಹನುಮಂತಿಯವರನ್ನು ಗೋವಿನದೊಡ್ಡಿಯಲ್ಲಿ ಮಣ್ಣು ಮಾಡಿರುತ್ತಾರೆ. ಹನುಮಂತಿಯವರು 15 ವರ್ಷಗಳ ಹಿಂದೆ ತೀರಿಕೊಂಡಿದ್ದು 10 ವರ್ಷಗಳ ಹಿಂದೆ ಅಲ್ಲ ಎಂದರೆ ಸರಿಯಲ್ಲ. ಹನುಮಂತಿಯವರ ಮಣ್ಣಿಗೆ ನಾನು ಹೋಗಿಲ್ಲ ಮತ್ತು ಅವರು ತೀರಿಕೊಂಡಿರುವ ವಿಷಯವೂ ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಂದೆ ರಾಮಯ್ಯ ರವರು ತೀರಿಕೊಂಡು 10 ವರ್ಷ ಆಗಿರುತ್ತದೆ. ರಾಮಯ್ಯ ರವರನ್ನು ಗೋವಿನದೊಡ್ಡಿ ಸೀಮಾಂತರದ ಜಮೀನಿನಲ್ಲಿ ಮಣ್ಣು ಮಾಡಿದ್ದು ಆ ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. ಆ ಜಮೀನಿನ ಉತ್ತರಕ್ಕೆ ರಾಮಯ್ಯ ರವರನ್ನು ಮಣ್ಣು ಮಾಡಿದ್ದರು. ರಾಮಯ್ಯ ರವರು ತೀರಿಕೊಂಡು 24 ವರ್ಷ ಆಗಿದ್ದು ಅವರು 2000 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಯ್ಯ

ರವರನ್ನು ಕ್ಯಾಂಪನಲ್ಲಿ ಪಂಪಾಪತಿ ಯವರ ಹೊಲದ ಪಕ್ಕದಲ್ಲಿ ಮಣ್ಣು ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಾಮಯ್ಯ ರವರು ಯಾವಾಗ ತೀರಿಕೊಂಡಿರುತ್ತಾರೆ ಮತ್ತು ಅವರನ್ನು ಎಲ್ಲಿ ಮಣ್ಣು ಮಾಡಿರುತ್ತಾರೆ ನನಗೆ ಗೊತ್ತಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರಾಮಯ್ಯ ರವರ ಹೆಂಡತಿ ಹನುಮಂತೆಮ್ಮ ಅವರು ತೀರಿಕೊಂಡು 10 ವರ್ಷ ಆಗಿರುತ್ತದೆ. ಹನುಮಂತೆಮ್ಮ ರವರನ್ನು ಗೋವಿನದೊಡ್ಡಿ ಸೀಮಾಂತರದ ಜಮೀನಿನಲ್ಲಿ ಮಣ್ಣು ಮಾಡಿದ್ದು ಆ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಎಲ್ಲರನ್ನೂ ಒಂದೇ ಜಮೀನಿನಲ್ಲಿ ಮಣ್ಣು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಹನುಮಂತೆಮ್ಮ ರವರು 2021 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಗೋವಿನದೊಡ್ಡಿಯ ಊರ ಮುಂದೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಹನುಮಂತೆಮ್ಮ ರವರನ್ನು ತಾಯಮ್ಮ ಎಂಬ ಹೆಸರಿನ ಜಮೀನಿನಲ್ಲಿ ಮಣ್ಣು ಮಾಡಿರುತ್ತಾರೆ ಎಂದರೆ ನಿಜ.

1 ನೇ ಪ್ರತಿವಾದಿಯ ಸಹೋದರ ಮಹಾದೇವಪ್ಪ ರವರು ತೀರಿಕೊಂಡು 03 ವರ್ಷ ಆಗಿರುತ್ತದೆ. ಮಹಾದೇವಪ್ಪ ರವರು ಬೆಂಗಳೂರಿನಲ್ಲಿ ತೀರಿಕೊಂಡಿರುತ್ತಾರೆ. ಮಹಾದೇವಪ್ಪ ರವರನ್ನು ಗೋವಿನದೊಡ್ಡಿ ಊರಿನ ಮುಂದೆ ಮಣ್ಣು ಮಾಡಿರುತ್ತಾರೆ. ಮಹಾದೇವಪ್ಪ ರವರು ಬೆಂಗಳೂರಿನ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದು ಆ ಆಸ್ಪತ್ರೆಯ ಹೆಸರು ಗೊತ್ತಿಲ್ಲ. ಮಹಾದೇವಪ್ಪ ರವರು ತೀರಿಕೊಂಡು ಒಂದು ದಿನಕ್ಕೆ ಅವರ ದೇಹವನ್ನು ಊರಿಗೆ ತಂದಿರುತ್ತಾರೆ. ಮಹಾದೇವಪ್ಪ ರವರ ಮೃತದೇಹವನ್ನು ಗೋವಿನದೊಡ್ಡಿಗೆ ಆಂಬುಲೇನ್ಸನಲ್ಲಿ ತಂದಿರುತ್ತಾರೆ. 2013 ರಲ್ಲಿ ಮಹಾದೇವಪ್ಪ ರವರು ಹರ್ಟ ಅಟ್ಯಾಕ್ ಆಗಿ ಗೋವಿನದೊಡ್ಡಿಯ ಮನೆಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮಹಾದೇವಪ್ಪ ರವರು ತೀರಿಕೊಂಡು 11 ವರ್ಷ ಆಗಿದ್ದು 03 ವರ್ಷ ಆಗಿಲ್ಲ ಎಂದರೆ ಸರಿಯಲ್ಲ.

ಮಹಾದೇವಪ್ಪ ರವರ ತಮ್ಮ ನಾಗನಗೌಡ ರವರು ತೀರಿಕೊಂಡು 05 ವರ್ಷ ಆಗಿರುತ್ತದೆ. ನಾಗನಗೌಡ ರವರನ್ನು ಊರಿನ ಮುಂದೆ ಇರುವ ಹೊಲದಲ್ಲಿ ಮಣ್ಣು ಮಾಡಿರುತ್ತಾರೆ. ನಾಗನಗೌಡ ರವರು ತೀರಿಕೊಂಡು 03 ವರ್ಷ ಆಗಿರುತ್ತದೆ ಎಂದರೆ ನಿಜ.

ಕಳ್ಳ ಹನುಮಪ್ಪನ ಕ್ಯಾಂಪನಲ್ಲಿ ನನ್ನ ತಂದೆ ಮಾತ್ರ ಇದ್ದು ನಾನು ಅವರ ಜೊತೆ ಇರಲಿಲ್ಲ. ವ್ಯವಸಾಯ ಮಾಡಲು ನಾನು ಮತ್ತು ನನ್ನ ತಂದೆ ಕಳ್ಳ ಹನುಮಪ್ಪನ ಕ್ಯಾಂಪನಲ್ಲಿ ಸುಮಾರು 10 ವರ್ಷಗಳ ವರೆಗೆ ಇದ್ದೆವು ಎಂದರೆ ಸರಿಯಲ್ಲ. ನಾನು ಸಂಜೀವನಾಯಕ ರವರ ಮನೆಯಲ್ಲಿ ಸುಮಾರು 10 ವರ್ಷಗಳ ವರೆಗೆ ವಾಸವಿದ್ದೆ. ನಾನು ಸಂಜೀವನಾಯಕ ರವರ ಮನೆಯಲ್ಲಿ

ಕೆಲಸಕ್ಕೆಂದು ಇರಲಿಲ್ಲ. ನಾನು ಸಂಜೀವ ನಾಯಕ ರವರ ಮನೆಯಲ್ಲಿ ಸುಮಾರು 15 ರಿಂದ 20 ವರ್ಷ ಇದ್ದೆ ಎಂದರೆ ಸರಿಯಲ್ಲ.

ನನ್ನ ಹಾಗೂ 1 ನೇ ಪ್ರತಿವಾದಿಯ ಮದುವೆ ಆಗಿ 50 ವರ್ಷ ಆಗಿದ್ದು ಮದುವೆ ಹುಣ್ಣಿಮೆ ದಿವಸ ಆಗಿರುತ್ತದೆ. ಮದುವೆ ನಾಗನಗೌಡ ರವರ ಮನೆಯ ಮುಂದೆ ಆಗಿರುತ್ತದೆ. ಮದುವೆ ಆಗುವಾಗ ನನಗೆ 20 ವರ್ಷ ವಯಸ್ಸು ಆಗಿತ್ತು. ನಾಗನಗೌಡ ರವರ ಮನೆ ಹೆಗ್ಗಡದಿನ್ನಿಯಲ್ಲಿ ಬರುತ್ತದೆ. ಹೆಗ್ಗಡದಿನ್ನಿ ಸಿರವಾರ ತಾಲೂಕಿನಲ್ಲಿ ಬರುತ್ತದೆ, ಸಾಕ್ಷಿ ಮುಂದುವರೆದು ಯಾವ ತಾಲೂಕಿನಲ್ಲಿ ಬರುತ್ತದೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹೆಗ್ಗಡದಿನ್ನಿಯಲ್ಲಿ ಎಷ್ಟು ಮನೆಗಳು ಇರುತ್ತವೆ ಗೊತ್ತಿಲ್ಲ. ಹೆಗ್ಗಡದಿನ್ನಿಯಲ್ಲಿ ನಾಗನಗೌಡ ರವರ ಮನೆ ಉತ್ತರಕ್ಕೆ ಬರುತ್ತದೆ. ನಾಗನಗೌಡ ರವರ ಮನೆ ಜಂತಿನ ಮನೆ ಆಗಿರುತ್ತದೆ. ಆ ಮನೆಯ ಉತ್ತರಕ್ಕೆ ಮದುವೆಯ ಹಂದರವನ್ನು ಹಾಕಿದ್ದರು. ನಾಗನಗೌಡ ರವರ ಮನೆಯ ಉತ್ತರಕ್ಕೆ ಅವರ ಅಣ್ಣನಾದ ರುದ್ರಪ್ಪ ರವರ ಮನೆ ಬರುತ್ತದೆ. ನಾಗನಗೌಡ ರವರ ಮನೆಯ ಮುಂದೆ ಸುಮಾರು 5-6 ಫೀಟ್ ವಿಸ್ತೀರ್ಣದ ಅಂಗಳ ಇದೆ. ನಾಗನಗೌಡ ರವರ ಮನೆಯ ಪೂರ್ವಕ್ಕೆ ಸುಮಾರು 04 ಫೀಟ್ ಅಗಲದ ಒಂದು ಕಾಲು ದಾರಿ ಇರುತ್ತದೆ ಎಂದರೆ ನಿಜ. ಆ ಕಾಲು ದಾರಿಯಲ್ಲಿ ಜನರು ಮನೆಗಳಿಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ನಿಜ. ನಾಗನಗೌಡ ರವರ ಮನೆಯ ಮುಂದೆ ಇರುವ 04 ಫೀಟ್ ಅಗಲದ ಕಾಲು ದಾರಿಯಲ್ಲಿ ಮದುವೆಯ ಹಂದರವನ್ನು ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. 04 ಫೀಟ್ ಅಗಲದ ಜಾಗ ಕಾಲು ದಾರಿಯಾಗಿದ್ದು ಅಲ್ಲಿ ಜನರು ಓಡಾಡುವುದರಿಂದ ಮದುವೆ ಹಂದರ ಹಾಕಲು ಆಗುವುದಿಲ್ಲ ಎಂದರೆ ಸರಿಯಲ್ಲ. ವಾಸ್ತು ಪ್ರಕಾರ ಮದುವೆಯ ಹಂದರವನ್ನು ಉತ್ತರ ದಿಕ್ಕಿಗೆ ಹಾಕಲು ಬರುವುದಿಲ್ಲ ಪೂರ್ವ ದಿಕ್ಕಿಗೆ ಹಾಕಬೇಕಾಗುತ್ತದೆ ಎಂದರೆ ಉತ್ತರಕ್ಕೆ ಹಾಕಿದ್ದರು ಎಂದು ಹೇಳುತ್ತಾರೆ.

ನನ್ನ ಹಾಗೂ 1 ನೇ ಪ್ರತಿವಾದಿಯ ಮದುವೆಗೆ 200 ಕ್ಕಿಂತ ಹೆಚ್ಚಿಗೆ ಜನ ಬಂದಿದ್ದು ಅವರೆಲ್ಲರ ಹೆಸರು ಹೇಳಲು ಬರುವುದಿಲ್ಲ. ಮದುವೆಗೆ ಅಯ್ಯನವರು ಯಾರು ಬಂದಿದ್ದರು ಅವರ ಹೆಸರು ಗೊತ್ತಿಲ್ಲ ಆದರೆ ಅವರು ಹೆಗ್ಗಡದಿನ್ನಿ ಊರಿನವರೇ ಆಗಿದ್ದರು. ಹೆಗ್ಗಡದಿನ್ನಿಯಲ್ಲಿ ಅಯ್ಯನವರು ಯಾರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮದುವೆಯಲ್ಲಿ ಪೂರ್ವಕ್ಕೆ ಮುಖ ಮಾಡಿ ಕುಳಿತಿದ್ದೆ. 1 ನೇ ಪ್ರತಿವಾದಿ ನನ್ನ ಯಾವ ದಿಕ್ಕಿಗೆ ಕುಳಿತಿದ್ದರು ಗೊತ್ತಿಲ್ಲ. 1 ನೇ ಪ್ರತಿವಾದಿ ಮದುವೆಯಲ್ಲಿ ಬಿಳಿ ಬಟ್ಟೆ ಧರಿಸಿದ್ದರು. ನಾನು ಕೆಂಪು ಸೀರೆ ಹುಟ್ಟಿದ್ದೆ. ಈ ಎಲ್ಲಾ ಮಾತುಗಳನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಗ್ಗಡದಿನ್ನಿಯ ನಾಗನಗೌಡ ರವರ ಮನೆಯ ಮುಂದೆ ನನ್ನ ಮದುವೆ ಆಗಲು ಸಾಧ್ಯವೇ ಇಲ್ಲ ಕಾರಣ ನಾನು ಹಾಗೂ 1 ನೇ ಪ್ರತಿವಾದಿ ಬೇರೆ

ಬೇರೆ ಆಗಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-42 ನ್ಯಾಯಾಲಯದಲ್ಲಿ ಇತ್ತು. ನಿಪಿ-42 ನ್ನು ತಹಸೀಲ್ದಾರ ಕಚೇರಿಯಿಂದ ಪಡೆದಿರುತ್ತೇವೆ. ನಿಪಿ-42 ನ್ನು ನನ್ನ ಅಣ್ಣ ತೆಗೆಸಿರುತ್ತಾರೆ ಅದನ್ನು ಪಡೆದು 30 ವರ್ಷ ಆಗಿರುತ್ತದೆ. ನಿಪಿ-42 ನ್ನು ನಾಗನಗೌಡ ರವರು ಬರೆದಿರುತ್ತಾರೆ. ನಿಪಿ-42 ನ್ನು ಯಾವ ದಿನಾಂಕ, ತಿಂಗಳು ಮತ್ತು ವರ್ಷ ಬರೆದಿರುತ್ತಾರೆ ನೆನಪಿಲ್ಲ. ನಿಪಿ-42 ನ್ನು ಬರೆದು 30 ವರ್ಷ ಆಗಿರುತ್ತದೆ. ನಿಪಿ-42 ರಲ್ಲಿ ಏನು ಬರೆಯಲಾಗಿದೆ ಗೊತ್ತಿದೆ. ನಿಪಿ-42 ರ ವಿಷಯವನ್ನು ನನಗೆ ನಮ್ಮ ವಕೀಲರು 2-3 ವರ್ಷಗಳ ಹಿಂದೆ ಹೇಳಿರುತ್ತಾರೆ. ನಿಪಿ-42 ಕ್ಕೆ ಯಾರು ಸಾಕ್ಷಿದಾರರು ಇರುತ್ತಾರೆ ಮತ್ತು ಅವರ ಹೆಸರು ಏನು ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ನಿಪಿ-42 ನೋಂದಣಿ ಆಗಿಲ್ಲ ಅದನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾಗನಗೌಡ ರವರು ಹೆಬ್ಬೆಟ್ಟಿನ ಸಹಿ ಮಾಡುತ್ತಿದ್ದರು. ನಿಪಿ-42 ಕ್ಕೆ ನಾಗನಗೌಡ ರವರು ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ. ನಿಪಿ-42 ಆಗಿದ್ದು ನನಗೆ ಗೊತ್ತಿರಲಿಲ್ಲ ನನ್ನ ಅಣ್ಣನಿಗೆ ಗೊತ್ತಾಗಿದ್ದು ಆಗ ಅವರು ನಿಪಿ-42 ನ್ನು ತೆಗೆಸಿರುತ್ತಾರೆ. ನಿಪಿ-43 ನ್ನು ಎಷ್ಟು ರೂಪಾಯಿ ಸ್ಟ್ಯಾಂಪ್ ಕಾಗದದ ಮೇಲೆ ಬರೆಸಿರುತ್ತಾರೆ ಗೊತ್ತಿಲ್ಲ ಅದನ್ನು ನನ್ನ ಅಣ್ಣ ತೆಗೆಸಿರುತ್ತಾರೆ. ನಿಪಿ-43 ರಲ್ಲಿ ನನ್ನ ಮೈದುನ ಹಾಗೂ ನಾದಿನಿಯರ ವಿಷಯಗಳನ್ನು ಬರೆದಿರುತ್ತಾರೆ. ನಿಪಿ-43 ಯಾರ ಯಾರ ಮಧ್ಯೆ ಆಗಿರುತ್ತದೆ ಗೊತ್ತಿಲ್ಲ. ನಿಪಿ-43 ನ್ನು ಯಾರು ಬರೆದಿರುತ್ತಾರೆ ಗೊತ್ತಿಲ್ಲ. ನಿಪಿ-43 ಕ್ಕೆ ನಾಗನಗೌಡ ಹಾಗೂ ಹನುಮಂತೆಮ್ಮ ರವರು ಸಹಿ ಮಾಡಿರುತ್ತಾರೆ. ನಿಪಿ-43 ಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರುವುದಿಲ್ಲ. ನಿಪಿ-42 ಮತ್ತು ನಿಪಿ-43 ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

ನಾಗನಗೌಡ ರವರು 1 ನೇ ಪ್ರತಿವಾದಿಯ ವಿರುದ್ಧ ಓ.ಎಸ್ ನಂಬರ 6/1992 ಎಂದು ಒಂದು ದಾವೆ ಹೂಡಿದ್ದರು ಎಂದರೆ ನಿಜ. ಸಾಕ್ಷಿಗೆ ಈಗ ನಿಪಿ-46 ಮತ್ತು 49 ರಲ್ಲಿರುವ ಸಹಿಗಳು ಹಾಗೂ ನಿಪಿ-48 ರಲ್ಲಿರುವ 1 ನೇ ಪ್ರತಿವಾದಿಯ ಸಹಿ ಬೇರೆ ಬೇರೆ ಆಗಿರುತ್ತದೆ ಎಂದರೆ ಅದೇರೀತಿಯಾಗಿ ಮಾಡಿರಬಹುದು ಎಂದು ಹೇಳುತ್ತಾರೆ. ನಿಪಿ-46 ರಲ್ಲಿರುವ ಸಹಿ 1 ನೇ ಪ್ರತಿವಾದಿಯದ್ದು ಅಲ್ಲಾ ಎಂದರೆ ಸರಿಯಲ್ಲ. ಓ.ಎಸ್ ನಂಬರ 6/1992 ರಲ್ಲಿ 1 ನೇ ಪ್ರತಿವಾದಿ ಪ್ರತಿವಾದಿ ಪತ್ರವನ್ನು ಸಲ್ಲಿಸಿರುವುದಿಲ್ಲ ಮತ್ತು ಯಾವುದೇ ರಾಜಿ ಆಗಿರುವುದಿಲ್ಲ ಕೇವಲ ವಕಾಲತ್‌ನ್ನು ಮಾತ್ರ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಓ.ಎಸ್ ನಂಬರ 6/1992 ನ್ನು ನಾಗನಗೌಡ ರವರು ದಿನಾಂಕ 18-06-1998 ರಂದು ವಜಾ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾಗನಗೌಡ ರವರ ಹೆಂಡತಿ ಹನುಮಂತೆಮ್ಮ ರವರು 1 ನೇ ಪ್ರತಿವಾದಿಯ ತಂದೆಯ ತಂಗಿ ಎಂದರೆ ನಿಜ. ನಾಗನಗೌಡ ಹಾಗೂ ಹನುಮಂತೆಮ್ಮ ರವರಿಗೆ ವಯಸ್ಸಾದ ಕಾರಣ ಅವರನ್ನು ಹಾಗೂ ಜಮೀನುಗಳನ್ನು ನೋಡಿಕೊಂಡು ಬರಲು 1 ನೇ ಪ್ರತಿವಾದಿ ಹೋಗುತ್ತಿದ್ದರು ಎಂದರೆ ನಾಗನಗೌಡ

ಹಾಗೂ ಹನುಮಂತೆಮ್ಮ ರವರು 1ನೇ ಪ್ರತಿವಾದಿಯ ಮದುವೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-32 ಮತ್ತು ನಿಪಿ-33 ನ್ನು ದೇವದುರ್ಗದಲ್ಲಿ ತೆಗೆಸಿರುತ್ತೇನೆ. ದೇವದುರ್ಗದ ಯಾವ ಕಚೇರಿಯಲ್ಲಿ ಆ ದಾಖಲೆಗಳನ್ನು ತೆಗೆಸಲಾಗಿದೆ ಗೊತ್ತಿಲ್ಲ ಅವುಗಳನ್ನು ನನ್ನ ಅಣ್ಣ ತೆಗೆಸಿರುತ್ತಾರೆ. ನಿಪಿ-32 ಮತ್ತು ನಿಪಿ-33 1ನೇ ಪ್ರತಿವಾದಿಗೆ ಸಂಬಂಧಿಸಿರುತ್ತದೆ. ನಿಪಿ-32 ಮತ್ತು ನಿಪಿ-33 ಆಸ್ತಿ ದಾಖಲೆಗಳು ಆಗಿರುತ್ತವೆ. ನಿಪಿ-32 ಮತ್ತು 33 ನ್ನು ನನ್ನ ಅಣ್ಣ ತೆಗೆಸಿ ಸುಮಾರು 30 ವರ್ಷ ಆಗಿರುತ್ತದೆ.

ಎ ಶೆಡ್ಯೂಲ್‌ನ 1 ರಿಂದ 5ನೇ ದಾವಾ ಆಸ್ತಿಗಳನ್ನು 1ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎ ಶೆಡ್ಯೂಲ್‌ನ 1 ರಿಂದ 5ನೇ ದಾವಾ ಆಸ್ತಿಗಳನ್ನು 1ನೇ ಪ್ರತಿವಾದಿ ನಾಗನಗೌಡ ರವರಿಂದ ಖರೀದಿ ಮಾಡಿದ್ದು ಆದರೆ ಸಂಬಂಧದಲ್ಲಿ ನಾಗನಗೌಡ ರವರು 1 ನೇ ಪ್ರತಿವಾದಿಗೆ ಸೋದರಮಾವನಾಗಬೇಕು ಆದಕಾರಣ ನೋಂದಾಯಿತ ಕ್ರಯಪತ್ರವನ್ನು ಮಾಡಿಸುವ ಬದಲು ಕೇವಲ 1ನೇ ಪ್ರತಿವಾದಿಯ ಹೆಸರಿಗೆ ಎ ಶೆಡ್ಯೂಲ್‌ನ 1 ರಿಂದ 5ನೇ ದಾವಾ ಆಸ್ತಿಗಳನ್ನು ಮುಟೇಶನ್ ಮಾಡಿಸಿದ್ದರು ಎಂದರೆ ಸರಿಯಲ್ಲ. ಎ ಶೆಡ್ಯೂಲ್‌ನ 6ನೇ ದಾವಾ ಆಸ್ತಿಯನ್ನು 1ನೇ ಪ್ರತಿವಾದಿ ದಿನಾಂಕ 04-01-1990 ರಂದು ದಾಖಲೆ ಸಂಖ್ಯೆ 1588 ರಂತೆ ದಿನೇಶ ತಂದೆ ಗಂಗಾಧರ ತಿಲಕ್ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನಾಗನಗೌಡ ರವರು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ ಶೆಡ್ಯೂಲ್‌ನ 7ನೇ ದಾವಾ ಆಸ್ತಿ ಮಹಾದೇವಮ್ಮ ಗಂಡ ರಾಮಯ್ಯ ರವರದ್ದು ಇದ್ದು ಅದು 1ನೇ ಪ್ರತಿವಾದಿಯ ಹೆಸರಿಗೆ ಮಂಜೂರು ಮಾಡಲಾಗಿದೆ ಮತ್ತು ಆ ಪ್ರಕಾರ ದಿನಾಂಕ 06-06-2002 ರಂತೆ ಆದೇಶ ಆಗಿರುತ್ತದೆ ಎಂದರೆ ಅದನ್ನು ಖರೀದಿ ಮಾಡಲಾಗಿದೆ ಎಂದು ಹೇಳುತ್ತಾರೆ. ಎ ಶೆಡ್ಯೂಲ್‌ನ 7ನೇ ದಾವಾ ಆಸ್ತಿಯನ್ನು ಖರೀದಿ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ ಶೆಡ್ಯೂಲ್‌ನ 8ನೇ ದಾವಾ ಆಸ್ತಿ 1ನೇ ಪ್ರತಿವಾದಿಗೆ ತಮ್ಮ ತಂದೆ ರಾಮಯ್ಯ ರವರಿಂದ ವರ್ಗಾವಣೆ ಆಗಿದ್ದು ಅದು ಒಂದೇ 1ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಎರಡು ಆಸ್ತಿಗಳು ಇರುತ್ತವೆ ಎಂದು ಹೇಳುತ್ತಾರೆ. ಎ ಶೆಡ್ಯೂಲ್‌ನ 9ನೇ ದಾವಾ ಆಸ್ತಿಯನ್ನು 1ನೇ ಪ್ರತಿವಾದಿ ದಾಖಲೆ ಸಂಖ್ಯೆ 300/1971-72 ದಿನಾಂಕ 26-05-1971 ರಂದು ಅಮೀನಾಬೀ ಗಂಡ ಬಾವಾಸಾಬ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನಾಗನಗೌಡ ರವರು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಎ ಶೆಡ್ಯೂಲ್‌ನ 10 ಮತ್ತು 11ನೇ ದಾವಾ ಆಸ್ತಿಗಳನ್ನು 1ನೇ ಪ್ರತಿವಾದಿ ರಂಗಸ್ವಾಮಿ ತಂದೆ ಕೃಷ್ಣಯ್ಯ ರವರಿಂದ ದಿನಾಂಕ 02-07-2015 ರಂದು ಖರೀದಿ ಮಾಡಿರುತ್ತಾರೆ ಎಂದರೆ ನಾಗನಗೌಡ ರವರ ಆಸ್ತಿಗಳಿಂದ ಬಂದ ಆದಾಯದಿಂದ

ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಎ ಶೆಡ್ಯೂಲ್‌ನ 10 ಮತ್ತು 11 ನೇ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಎ ಶೆಡ್ಯೂಲ್‌ನ 12 ನೇ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಹನುಮಂತೆಮ್ಮ ಗಂಡ ಸಿದ್ದಣ್ಣ ರವರಿಂದ ದಿನಾಂಕ 09-01-1992 ರಂದು ಖರೀದಿ ಮಾಡಿರುತ್ತಾರೆ ಎಂದರೆ ತಮ್ಮ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಎ ಶೆಡ್ಯೂಲ್‌ನ 13 ಮತ್ತು 14 ನೇ ದಾವಾ ಆಸ್ತಿಗಳನ್ನು 4 ಮತ್ತು 5 ನೇ ಪ್ರತಿವಾದಿಗಳು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮಹಿಂದ್ರಾ ಟ್ರ್ಯಾಕ್ಟರನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್‌ನ 2 ನೇ ದಾವಾ ಆಸ್ತಿ 5 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಕೆಎ-36-ಇಕೆ-5420 ಸ್ಪೆಂಡರ್ ಶೈರ್ ಎಂಬುದಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್‌ನ 4 ನೇ ದಾವಾ ಆಸ್ತಿ ಮಕ್ಕಳ ಹೆಸರಿನಲ್ಲಿದ್ದು ಅವರ ಹೆಸರುಗಳು ಗೊತ್ತಿಲ್ಲ. ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಬಿ ಶೆಡ್ಯೂಲ್‌ನ 4 ನೇ ದಾವಾ ಆಸ್ತಿ 1 ನೇ ಪ್ರತಿವಾದಿಯ ಕುಟುಂಬಕ್ಕೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-34 ರಿಂದ ನಿಪಿ-36 ಕ್ಕೆ ಹಾಗೂ ನನಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅದು ನನ್ನ ಮಗಳ ಮದುವೆಯ ಪೊಟೋಗಳು ಇರುತ್ತವೆ ಎಂದು ಹೇಳುತ್ತಾರೆ. ನನಗೆ ಹಾಗೂ 1 ನೇ ಪ್ರತಿವಾದಿಗೆ ಸಂಬಂಧ ಇಲ್ಲ ಆದಕಾರಣ ನಿಪಿ-34 ರಿಂದ ನಿಪಿ-36 ನನ್ನ ಮಗಳ ಮದುವೆಯ ಪೊಟೋಗಳು ಎಂಬುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-37 ಮತ್ತು ನಿಪಿ-39 ಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಕ್ಕಳ ವಯಸ್ಸುಗಳು 35 ರಿಂದ 36 ಇರುತ್ತದೆ ಎಂದರೆ ನಿಜ. 1 ನೇ ಪ್ರತಿವಾದಿಯ ಮಕ್ಕಳಿಗೆ ವಯಸ್ಸಾಗಿದ್ದು ಆದಕಾರಣ 1 ನೇ ಪ್ರತಿವಾದಿ ನನ್ನನ್ನು ಮದುವೆ ಮಾಡಿಕೊಳ್ಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನಗೆ ಮದುವೆಯಾದ 15 ವರ್ಷಗಳ ನಂತರ ಮಗಳು ಜನಿಸಿದ್ದು ಆ ಸಮಯದಲ್ಲಿ 1 ನೇ ಪ್ರತಿವಾದಿ ಇನ್ನೊಂದು ಮದುವೆ ಆಗಿದ್ದರು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿಯ ಮದುವೆ 1974 ರಲ್ಲಿ ಆಗಿರುತ್ತದೆ ಎಂದರೆ ಅವರು ಮದುವೆ ಮಾಡಿಕೊಂಡಿದ್ದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹಾಗೂ 1 ನೇ ಪ್ರತಿವಾದಿಯ ಮದುವೆ 1975 ರಲ್ಲಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತವರು ಮನೆ ಕೊತ್ತದೊಡ್ಡಿ ಆಗಿದ್ದು ಅಲ್ಲಿ ನಾನು 2-3 ಭಾರಿ ಮತ ಚಲಾಯಿಸಿರುತ್ತೇನೆ. ನಾನು ಈ ವರ್ಷ ಆದ ಲೋಕಸಭಾ ಚುನಾವಣೆಯಲ್ಲಿ ಮತ

ಚಲಾಯಿಸಿದ್ದೇನೆ. ನಾನು 25-30 ವರ್ಷಗಳಿಂದ ಕೊತ್ತದೊಡ್ಡಿಯಲ್ಲಿ ಮತ ಚಲಾಯಿಸುತ್ತಾ ಬಂದಿರುತ್ತೇನೆ ಎಂದರೆ ನಿಜ. ಹೆಗ್ಗಡದಿನ್ನಿಯ ಚುನಾವಣಾ ಪಟ್ಟಿಯಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಅದನ್ನು ತೆಗೆದಿರಬಹುದು ಎಂದು ಹೇಳುತ್ತಾರೆ. ಗೋವಿನದೊಡ್ಡಿಯ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ನನ್ನ ಹೆಸರನ್ನು ಸೇರಿಸಿರುವುದಿಲ್ಲ ಎಂದು ಹೇಳುತ್ತಾರೆ. ನಾನು 1 ನೇ ಪ್ರತಿವಾದಿಗೆ ಹಾಗೂ ಅವರ ಕುಟುಂಬಕ್ಕೆ ಯಾವುದೇ ರೀತಿಯಿಂದಲೂ ಸಂಬಂಧ ಇರುವುದಿಲ್ಲ ಆದಕಾರಣ ನನ್ನ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೈನುಗಾರಿಕೆ ಮತ್ತು ಭತ್ತದ ವ್ಯಾಪಾರ ಮತ್ತು ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವ್ಯಾಪಾರಗಳಿಂದ 1 ನೇ ಪ್ರತಿವಾದಿಗೆ ಸ್ವಂತ ದುಡಿಮೆ ಮತ್ತು ಆದಾಯ ಇತ್ತು ಎಂದರೆ ಸರಿಯಲ್ಲ. ರಾಮಯ್ಯ ರವರಿಗೆ 1 ನೇ ಪ್ರತಿವಾದಿ, ಯಲ್ಲಮ್ಮ, ಗಿರಯ್ಯ, ಸತ್ಯಮ್ಮ, ಮಹಾದೇವಪ್ಪ, ನಾಗನಗೌಡ ಮತ್ತು ಮಹಾದೇವಮ್ಮ ಮಕ್ಕಳು ಇರುತ್ತಾರೆ ಎಂದರೆ ನಿಜ. ರಾಮಯ್ಯ ರವರ ಮಕ್ಕಳು ಇದುವರೆಗೂ ವಿಭಾಗ ಆಗಿಲ್ಲ ಅವರೆಲ್ಲರೂ ಒಟ್ಟು ಕಟುಂಬದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ರಾಮಯ್ಯ ರವರ ಆಸ್ತಿಯಲ್ಲಿ ಇದುವರೆಗೂ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ರಾಮಯ್ಯ ರವರ ಮಕ್ಕಳು ವಿಭಾಗ ಆಗಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಬೇಕು ಎಂದು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.